

ಮನೆಯಲ್ಲೇ ಉಳಿದರು. ಮೂರನೆಯವರಾದ ಕೃಷ್ಣನಾದರೂ ಸರ್ಕಾರಿ ಕೆಲಸ ಸೇರಲಿ ಅಂತ ಮನೆಯವರ ಆಸೆಗೆ ತಕ್ಕಂತೆ, ಕೃಷ್ಣರವರು ಉತ್ತಮ ಓದಿನೊಂದಿಗೆ ತಾಲ್ಲೂಕ್ಕೊಂದರ ತಹಸೀಲ್ದಾರ್ ಆಗಿದ್ದರು.

ಇನ್ನೂ ಆಸ್ತಿ ಪಾಲಾಗದ ಆ ಕುಟುಂಬಕ್ಕೆ ಹೊಲ, ಗದ್ದೆ, ತೋಟ ಸೇರಿ, ಐನೂರೆಂಬತ್ತು ಎಕರೆ ಜಮೀನಿತ್ತು. ಇಡೀ ತಾಲ್ಲೂಕಿನಲ್ಲೇ, ಯಾಕೆ ಆ ಜಿಲ್ಲೆಯಲ್ಲೇ ಅಂತಹ ದೊಡ್ಡ ಜಮೀನ್ದಾರರು ಯಾರೂ ಇರಲಿಲ್ಲ! ಅಷ್ಟೊಂದು ಆಸ್ತಿಯನ್ನು ಇವರ ಕುಟುಂಬ ಹೇಗೆ ಗಳಿಸಿತು ಅಂತ ನಮಗನಿಸುವುದು ಸಹಜ. ಅದು ಭೂತಕಾಲದ ಇನ್ನೊಂದು ಕಥೆ; ಹಿಂದೆ ಮೈಸೂರು ಸಂಸ್ಥಾನವನ್ನು ಆಳುತ್ತಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಳ್ವಿಕೆಯಲ್ಲಿ ರಾಮಚಂದ್ರರವರ ಮುತ್ತಾತ ಮೀಸೆ ಬಸಪ್ಪನವರು ಜಿಲ್ಲೆಯೊಂದರ ಬಿಲ್ ಕಲೆಕ್ಟರ್ ಆಗಿದ್ದರು. ಮೀಸೆ ಬಸಪ್ಪನವರು ಕಂದಾಯದ ವಿಷಯದಲ್ಲಿ ಮೈಸೂರು ಸಂಸ್ಥಾನಕ್ಕೆ ಸಲ್ಲಿಸಿದ ಕ್ರಾಂತಿಕಾರಿ ಪರಿವರ್ತನೆಗಳನ್ನು ಮತ್ತು ಅದರಿಂದಾಗಿ ಮೈಸೂರು ಸಂಸ್ಥಾನಕ್ಕೆ ಆದ ಆರ್ಥಿಕ ಲಾಭಗಳನ್ನು ಗಮನಿಸಿ, ಅವರು ನೀಡಿದ ಅಮೂಲ್ಯ ಸೇವೆಗಾಗಿ ಅಂದಿನ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು, ಮೀಸೆ ಬಸಪ್ಪನವರಿಗೆ ಬರೆದು ಕೊಟ್ಟ ದಾನದ ಆಸ್ತಿ ಅದಾಗಿತ್ತು.

ರಾಮಚಂದ್ರ, ಕನ್ನಡದಲ್ಲಿ ಎಂ.ಎ ಮುಗಿಸಿ, 'ಭಾರತದಲ್ಲಿ ಧಾರ್ಮಿಕತೆ' ಎಂಬ ವಿಷಯದಲ್ಲಿ ಪಿಎಚ್.ಡಿ ಮಾಡಿ ಡಾಕ್ಟರೇಟ್ ಪಡೆದು ನಾಡಿನ ವಿಮರ್ಶಕರ ಉತ್ತಮ ಪ್ರಶಂಸೆಗೆ ಪಾತ್ರರಾಗಿದ್ದರು. ಮಹಾದೇವ, ಪಾಲಿಟಿಕ್ಸ್‌ನಲ್ಲಿ ಎಂ.ಎ ಮತ್ತು ಎಲ್.ಎಲ್.ಬಿ ಮುಗಿಸಿದ್ದರು. ಜಮೀನಿನ ಕಾರಣಕ್ಕೆ ಮಹಾದೇವ ಹಳ್ಳಿಯಲ್ಲೇ ಉಳಿದರೂ ಕೂಡ ಜಮೀನಿನ ವಿಷಯಕ್ಕಿಂತ ಹೆಚ್ಚಾಗಿ ರಾಜಕೀಯದಲ್ಲಿ ಅವರಿಗೆ ಹೆಚ್ಚು ಒಲವು ಇತ್ತು. ಆ ಕಾರಣದಿಂದಾಗಿ ತಮ್ಮ ಊರಿನಲ್ಲಿ ಇರುವುದಕ್ಕಿಂತ ಹೆಚ್ಚಾಗಿ ಹೊರಗೆ ರಾಜಕೀಯವಾಗಿ ಸಕ್ರಿಯರಾಗಿದ್ದರು. ಗ್ರಾಮೀಣ ಮತ್ತು ನಗರದ ಬಡವರ ಕಷ್ಟ- ಸುಖಗಳಿಗೆ ಹೆಚ್ಚಾಗಿ ಸ್ಪಂದಿಸುತ್ತ, ಅವರಿಗೆ ಸರ್ಕಾರಿ ಪ್ರಯೋಜಿತ ಯೋಜನೆಗಳ ಉಪಯೋಗಗಳನ್ನು ಸವಿವರವಾಗಿ ವಿವರಿಸುವ ಮೂಲಕ, ಆ ಜನರಿಗೆ ಹೆಚ್ಚು ಹೆಚ್ಚು ಆ ಯೋಜನೆಗಳು ದೊರೆಯುವಂತೆ ಮಾಡತೊಡಗಿದ್ದರು. ತಾಲ್ಲೂಕಿನ ನೀರಾವರಿ ಹೋರಾಟಗಳು, ರೈತ, ಕಾರ್ಮಿಕರು ಮತ್ತು ನಗರದ ಕಾರ್ಮಿಕ ಹೋರಾಟಗಳು, ಪರಿಸರ ಹೋರಾಟಗಳು ಸೇರಿದಂತೆ, ಹಲವಾರು ಚಳವಳಿ, ಹೋರಾಟಗಳನ್ನು ಕಟ್ಟಿ, ಹಳ್ಳಿಗಳು ಮತ್ತು ನಗರ ಅಭಿವೃದ್ಧಿಯಾಗುವಲ್ಲಿ ಸರ್ಕಾರಗಳಿಗೆ ಚುರುಕು ಮುಟ್ಟಿಸುವ ಅವರ ಪಾತ್ರವು